DIRECT BUS SERVICE from Sindagi to Bangalore

SRI R. B. CHOUDHAR :- (Sindagi): There is no direct bus service from Sindagi to Bangalore since a very long time. Recently, from Chincholi to Bangalore bus has been stopped which was going via Sindagi. It has caused great inconvenience to the people of Sindagi. So, I request the Hon'ble Minister for Transport to:

I. Restore Chincholi--Bangalore bus service.

II. Start direct bus service to Bangalore from Sindagi.

III. Divert Indi-Bangalore Super-Deluxe bus service via Sindhagi instead of Bijapur.

This arrangement will really help the people of Sindagi. So, will it be implemented soon ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುತ್ತೇನೆ.

ವಿಶ್ವ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಸಾಲ ಬಿಡುಗಡೆ.

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕು ಮಾದಬಾಳ್ ಹೋಬಳಿ ನೇತನಹಳ್ಳಿ ಗ್ರಾಮವನ್ನು ವಿಶ್ವ ಯೋಜನೆಗೆ ಆಯ್ಕೆ ಮಾಡಿದ್ದು ಸರಿಯಷ್ಟೆ. ದಿನಾಂಕ 4.10.91 ರಲ್ಲಿ 9 ಜನ ಫಲಾನುಭವಿಗಳಿಗೆ ವಿವಿಧ ಉದ್ದಿಮೆಗಳಿಗೆ ತಾತ್ಕಾಲಿಕ ಸಾಲ ಮಂಜೂರಾತಿ ಪತ್ರ ನೀಡಿ ಪ್ರಾರಂಭೋತ್ಸವನ್ನು ಮಾಡಿದ್ದು, ನಂತರ ಸಾಲ ಮಂಜೂರಾತಿಯನ್ನು ಈ ದಿನಾಂಕಕ್ಕೆ ಕೆಲವರಿಗೆ ಸಾಲ ಮಂಜೂರಾತಿಯನ್ನು ಸಹ ನೀಡಿಲ್ಲ. ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಇಬ್ಬರಿಗೆ ಮಾತ್ರ ಸಾಲ ಬಿಡುಗಡೆ ಮಾಡಿರುತ್ತಾರೆ. ಉಳಿದವರಿಗೆ ಸಾಲ ಬಿಡುಗಡೆ ಮಾಡಿರುವುದಿಲ್ಲ. ನಂತರ ಉಳಿದ ಏ ಉದ್ದಿಮೆದಾರರು ಯೋಜನೆಗೆ ಬೇಕಾದ ಬಿಲ್ಡಿಂಗ್‌ನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. ಹಾಗೂ ಫಲಾನುಭವಿಗಳು ಶೇಕಡಾ 25ಕ್ಕೂ ಹೆಚ್ಚು ಬಂಡವಾಳವನ್ನು ಯೋಜನೆಗೆ ಸ್ವಂತವಾಗಿ ಹೂಡಿರುತ್ತಾರೆ. ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಹಣ ಬಿಡುಗಡೆ ಮಾಡಲು ಹಲವಾರು ಕಾರಣಗಳನ್ನು ನೀಡಿ ಮುಂದೂಡುತ್ತಿದ್ದಾರೆ. ಫಲಾನುಭವಿಗಳು ಈ ಯೋಜನೆಯನ್ನು ನಂಬಿ ಸ್ವಂತ ಇದ್ದ ಹಣವನ್ನು ಹಾಗೂ ಸಾಲ ಪಡೆ ಯೋಜನೆಗೆ ಹಣ ತೊಡಗಿಸಿರುತ್ತಾರೆ. ಈ ರೀತಿ ಆದರೆ ಯೋಜನೆ ಫಲದಾಯಕವಾಗುವುದಿಲ್ಲ. ಫಲಾನುಭವಿಗಳು ಬೀದಿಪಾಲಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಈ ಕೋರಿಕೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ನಜೀರ್ ಅಹಮದ್:- (ನಗರ ಕ್ಷೇಮಾಭಿವೃದ್ಧಿಗಳ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಕಛೇರಿಯಲ್ಲಿ ಅಧಿಕಾರಿಗಳನ್ನು ಕರೆಸಿ...

ಶ್ರೀ ರೇವಣ್ಣ:- ಉತ್ತರ ಬೇಡಿಲ್ಲ.

ಅಧ್ಯಕ್ಷರು:- ಉತ್ತರ ಹೇಳುತ್ತಿದ್ದಾರೆ.

ಶ್ರೀ ನಜೀರ್ ಅಹಮದ್:- 9 ಜನ ಬೆನಿಫಿಷಿಯರೀಸ್‌ನಲ್ಲಿ ಇಬ್ಬರಿಗೆ ಲೋನ್ ರಿಲೀಸ್ ಆಗಿದೆ. ಇನ್ನೂ ಕೆಲವರು ಅಂದರೆ 4-5ಜನಕ್ಕೆ ರಿಲೀಸ್ ಆಗುತ್ತಿದೆ. ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಲೋನ್ ರಿಲೀಸ್ ಮಾಡುವುದಕ್ಕೆ ಮೊದಲು ಬೇರೆ ಬ್ಯಾಂಕುಗಳಿಂದ ನೋ ಡ್ಯೂ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗುತ್ತದೆ. ಆ ಸರ್ಟಿಫಿಕೇಟನ್ನು ಬೆನಿಫಿಷಿಯರೀಸ್ ಸಬ್‌ಮಿಟ್ ಮಾಡಿರಲಿಲ್ಲಾ ಎಂದು ತಡ ಗೊತ್ತಾಗಿದೆ. ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿರುತ್ತೇನೆ. ಲೋನ್ ಸ್ಯಾಂಕ್ಷನ್ ಮಾಡಿರುತ್ತಾರೆ. ಆದರೆ ರಿಲೀಸ್ ಮಾಡಿಲ್ಲ. ಕೂಡಲೇ ರಿಲೀಸ್ ಮಾಡಿ ಕೊಡಲು ಕ್ರಮ ತೆಗೆದುಕೊಳ್ಳುತ್ತೇನೆ.